# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾವೇರಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ಕೈಗಾರಿಕೆ ಇಲಾಖೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನಿವೃತ್ತರಾಗುವ ಅಧಿಕಾರಿಗಳ ವೇತನ/ರಜೆ ನಗಧೀಕರಣಕ್ಕಾಗಿ ಬಿಡುಗಡೆಗೆ ಲಭ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿ.ಎಫ್.ಪಿ. 2021 ದಿನಾಂಕ: 5.4.2021
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ಇವರ ಪತ್ರ ಸಂಖ್ಯೆ:ಹಾಜಿಪಂ/ಮುಲೆಅ/ಲೆಸ/5/2021-22 ದಿನಾಂಕ:10.5.2021

**ಪ್ರಸ್ತಾವನೆ:**

ಹಾವೇರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಕೈಗಾರಿಕೆ ಇಲಾಖೆಯು ನಿರ್ವಹಿಸುವ ಲೆಕ್ಕ ಶೀರ್ಷಿಕೆ 2851-00-107-0-27ರಡಿ ಒಟ್ಟು 6 ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಮಾತ್ರ ಭರ್ತಿಯಾಗಿದ್ದು ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎ.ಕೆ.ತಿಮ್ಮಾಪುರ ಇವರು ದಿನಾಂಕ:30.6.2021ರಂದು ವಯೋನಿವೃತ್ತಿ ಹೊಂದಲಿರುತ್ತಾರೆ. ಸದರಿಯವರ ವೇತನ ವೆಚ್ಚಕ್ಕಾಗಿ ಹೆಚ್.ಆರ್.ಎಂ.ಎಸ್. ಆಧಾರದ ಮೇಲೆ ಪ್ರಸ್ತಾವಿತ ಲೆಕ್ಕ ಶೀರ್ಷಿಕೆಯಡಿ ರೂ.4.47ಲಕ್ಷಗಳನ್ನು ಒದಗಿಸಲಾಗಿದೆ. ಇದರಲ್ಲಿ ಮಾರ್ಚ್ 2021 ರಿಂದ ಜುಲೈ 2021ರವರೆಗಿನ ವೇತನ ವೆಚ್ಚಕ್ಕಾಗಿ ಮೊದಲನೇ ಕಂತಿನ ಅನುದಾನವಾಗಿ ರೂ.1.86ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಆದರೆ ಸಹಾಯಕ ನಿರ್ದೇಶಕರು ದಿನಾಂಕ:30.6.2021ರಂದು ನಿವೃತ್ತರಾಗಲಿರುವುದರಿಂದ ಸದರಿಯವರಿಗೆ ಗಳಿಗೆ ರಜೆ ರಜೆನಗಧೀಕರಣ ಮತ್ತು ಜೂನ್ 2021ರವರೆಗಿನ ವೇತನ ವೆಚ್ಚಕ್ಕಾಗಿ ಅಗತ್ಯವಿರುವುದರಿಂದ ಆಯವ್ಯಯದಲ್ಲಿ ಒದಗಿಸಿರುವ ಪೂರ್ಣ ಅನುದಾನವನ್ನು ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಿದೆ.

ಆರ್ಥಿಕ ವರ್ಷದಲ್ಲಿ ನಿವೃತ್ತರಾಗಲಿರುವುದರಿಂದ ಹಾಗೂ ಇವರನ್ನು ಹೊರತುಪಡಿಸಿ ಯಾವುದೇ ಸಿಬ್ಬಂದಿಯವರುಗಳು ಇಲ್ಲದಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಆಯವ್ಯಯದಲ್ಲಿ ವೇತನ ವೆಚ್ಚಕ್ಕಾಗಿ ಒದಗಿಸಿರುವ ರೂ.4.47ಲಕ್ಷಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲು ಪರಿಗಣಿಸಿ ಈಗಾಗಲೇ ಬಿಡುಗಡೆಗೊಳಿಸಿರುವ ರೂ.1.86ಲಕ್ಷಗಳನ್ನು ಕಳೆದು ಬಿಡುಗಡೆಗೆ ಲಭ್ಯವಿರುವ ರೂ.2.61ಲಕ್ಷಗಳನ್ನು ಮೇಲೆ(1)ರರಲ್ಲಿ ಓದಲಾದ ಅಧಿಕಾರ ಪ್ರತ್ಯಾಯೋಜನೆಯ ಷರತ್ತನ್ನು ಸಡಿಲಿಸಿ ಲೆಕ್ಕ ಶೀರ್ಷಿಕೆ 2851-00-196-2-01-463ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 274 ವೆಚ್ಚ 6/2021(ಇ) ದಿನಾಂಕ: 28ನೇ ಮೇ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾವೇರಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ಕೈಗಾರಿಕೆ ಇಲಾಖೆಯಲ್ಲಿ ಆರ್ಥಿಕ ವರ್ಷದಲ್ಲಿ ನಿವೃತ್ತರಾಗಲಿರುವ ಅಧಿಕಾರಿಗಳ ವೇತನ/ರಜೆ ನಗದೀಕರಣಕ್ಕಾಗಿ ರೂ.2.61ಲಕ್ಷ (ರೂಪಾಯಿ ಎರಡು ಲಕ್ಷದ ಅರವತ್ತೊಂದು ಸಾವಿರಗಳು ಮಾತ್ರ)ಗಳನ್ನು ಲೆಕ್ಕ ಶೀರ್ಷಿಕೆ 2851-00-196-2-01-463 (2851-00-107-0-27-005)ರಡಿ ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿರುವುದಕ್ಕೆ ದಿನಾಂಕ:5.4.2021ರಂದು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆಯ ಷರತ್ತನ್ನು ಸಡಲಿಸಿ ಬಿಡುಗಡೆಗೊಳಿಸಲು ಸಹಮತಿಸಿದೆ.

ಯಾವುದೇ ಹಂತದಲ್ಲಿ ವಿಳಂಬವಾಗಿ ಅನುದಾನವನ್ನು ವ್ಯಪಗತವಾದಲ್ಲಿ ಇನ್ನೊಮ್ಮೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದಿಲ್ಲ ಹಾಗೂ ವ್ಯಪಗತವಾಗಲು ಕಾರಣರಾದ ಅಧಿಕಾರಿಗಳನ್ನೇ ಪೂರ್ಣ ಹೊಣೆಗಾರರನ್ನಾಗಿ ಪರಿಗಣಿಸಿ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ, ಹಾವೇರಿ
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಜಿಲ್ಲಾ ಖಜಾನಾಧಿಕಾರಿಗಳು, ಹಾವೇರಿ
7. .ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ